# <u>ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ</u>

**ನಸದೊ/ಸಾ.ಆ.ವಿ/ವಿ.ಸ.2/2008-09** **ದಿನಾಂಕ:18-08-2008**

## <u>-:: ವಿಶೇಷ ಸಭೆ ನಡವಳಿಕೆಗಳು ::-</u>

ದಿನಾಂಕ:18-08-2008ರಂದು ಸೋಮವಾರ ಬೆಳಿಗ್ಗೆ 11.00ಗಂಟೆಗೆ ನಗರಸಭೆಯ ಸಭಾಂಗಣದಲ್ಲಿ ಮಾನ್ಯ ನಗರಸಭಾ ಅಧ್ಯಕ್ಷರಾದ **ಶ್ರೀ ಜಿ.ರಾಮಕೃಷ್ಣ** ರವರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯಲ್ಲಿ ನಗರಸಭಾ ಉಪಾಧ್ಯಕ್ಷರು ಮತ್ತು ನಗರಸಭೆಯ ಎಲ್ಲಾ ಸದಸ್ಯರುಗಳು ಸೇರಿ ತೆಗೆದುಕೊಂಡ ನಿರ್ಣಯಗಳು:-

**<u>ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ:</u>**

| | ಹಾಜರಿ | ಗೈರು ಹಾಜರಿ | ಒಟ್ಟು |
|---|---|---|---|
| ಸದಸ್ಯರುಗಳು | 30 | 01 | 31 |

ಮೊದಲಿಗೆ ನಗರಸಭೆಯ ಆಯುಕ್ತರಾದ **ಶ್ರೀ ಎಸ್.ಜಿ.ರಾಜಶೇಖರ್‌ರವರು** ನಗರಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಗರಸಭೆಯ ಎಲ್ಲಾ ಸದಸ್ಯರವರಿಗೂ ಸಭೆಯಲ್ಲಿ ಸ್ವಾಗತವನ್ನು ಕೋರಿದರು, ನಂತರ ಮಾನ್ಯ ಅಧ್ಯಕ್ಷರನ್ನು ಸಭೆಯನ್ನು ಪ್ರಾರಂಭಿಸಲು ಅನುಮತಿಯನ್ನು ಕೋರಿದರು.

**<u>ವಿಷಯ ಸಂಖ್ಯೆ:1</u>**

ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ 2008-09ನೇ ಸಾಲಿನ ಎಸ್.ಎಫ್.ಸಿ. ಅನುದಾನದಡಿಯಲ್ಲಿ ದೊಡ್ಡಬಳ್ಳಾಪುರ ನಗರಸಭೆಗೆ ಬಿಡುಗಡೆಯಾದ 3.00ಕೋಟಿ ರೂ.ಗಳ ವಿಶೇಷ ಅನುದಾನದಲ್ಲಿ ಕಾಮಗಾರಿ ನಿರ್ವಹಿಸಲು ಅಂದಾಜು ಪ್ರತಿಯನ್ನು ತಯಾರಿಸಿ, ಆಡಳಿತಾತ್ಮಕ ಅನುಮೋದನೆ ಪಡೆದು ಪಾರದರ್ಶಕ ನಿಯಮಾನುಸಾರ ಕಾಮಗಾರಿ ನಿರ್ವಹಿಸಲು ಅನುಮೋದಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:1</u>**

ಮೇಲ್ಕಂಡ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು 2008-09ನೇ ಸಾಲಿನಲ್ಲಿ ವಿಶೇಷ ಎಸ್.ಎಫ್.ಸಿ. ಅನುದಾನದಡಿಯಲ್ಲಿ 3.00ಕೋಟಿ ರೂಪಾಯಿಗಳಿಗೆ ಈಗಾಗಲೇ ಈ ಹಿಂದೆ ಪಟ್ಟಿ ನೀಡಿರುವ ರಸ್ತೆಗಳ ಅಭಿವೃದ್ಧಿ ಬಗ್ಗೆ ಎಲ್ಲಾ ಸದಸ್ಯರು ತೀರ್ಮಾನಿಸಿದ ರೀತಿಯಲ್ಲಿ ಈ ಕೆಳಕಂಡಂತೆ ಕ್ರ.ಸಂ.1 ರಿಂದ 40ರ ವರೆಗಿನ ಕ್ರಿಯಾ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಿಕೊಂಡು ಟೆಂಡರ್ ಕರೆದು ನಿಯಮಾನುಸಾರ ಯೋಗ್ಯ ಗುತ್ತಿಗೆದಾರರಿಂದ ಕೆಲಸ ನಿರ್ವಹಿಸಲು ಮತ್ತು ನಿರ್ವಹಿಸಿದ ಬಿಲ್ ಪಾವತಿಸಲು ಅಧ್ಯಕ್ಷರಿಗೆ ಮತ್ತು ಪೌರಾಯುಕ್ತರಿಗೆ ಅಧಿಕಾರ ನೀಡಲು ಹಾಗೂ ಈ ಕೆಳಕಂಡ ಕ್ರಿಯಾ ಯೋಜನೆ ಪಟ್ಟಿಯಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳಿಗೂ ಸಹ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಈ ರಸ್ತೆಗಳು ನಗರಸಭೆಯ ವ್ಯಾಪ್ತಿಯಲ್ಲಿದ್ದು, ರಸ್ತೆಗಳು ತುಂಬಾ ಹದಗೆಟ್ಟಿರುವುದರಿಂದ ಸಾರ್ವಜನಿಕರು ನಗರಸಭಾ ಸದಸ್ಯರಿಗೆ, ಕೊಳಚೆ ನಿರ್ಮೂಲನ ಮಂಡಳಿ ಅಧ್ಯಕ್ಷರಾದ ಶ್ರೀ ಜೆ.ನರಸಿಂಹಸ್ವಾಮಿರವರಿಗೆ ಹಾಗೂ ನಗರಸಭೆಯ ಕಛೇರಿಗೆ ದೂರು ನೀಡಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರ ಹಿತಾದೃಷ್ಠಿಯನ್ನು ಗಮನದಲ್ಲಿಟ್ಟುಕೊಂಡು ಮತ್ತು ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಬದಿಯಲ್ಲಿ ಶಾಲಾ ಮಕ್ಕಳು ಓಡಾಡಲು ತೊಂದರೆಯಾಗಿರುತ್ತದೆ. ಆದ್ದರಿಂದ ಈ ಎಲ್ಲಾ ಸಮಸ್ಯೆಗಳನ್ನು ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡ ಲೋಕೋಪಯೋಗಿ ರಸ್ತೆಗಳು ನಗರದ ಮಧ್ಯಭಾಗದಲ್ಲಿರುವುದರಿಂದ ತುರ್ತಾಗಿ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಈ ಕೆಳಕಂಡ 3 ರಸ್ತೆಗಳಿಗೆ ನಗರಸಭಾ ವತಿಯಿಂದ ದುರಸ್ಥಿ ಪಡಿಸಲು ಸಭೆಯಲ್ಲಿ ಚರ್ಚಿಸಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

(1) ಗುರುಭವನದಿಂದ ಜನತಾಬಜಾರ್‌ವರೆಗಿನ ಡಾ.ಬಿ.ಆರ್.ಅಂಬೇಡ್ಕರ್ ರಸ್ತೆಗೆ ಡಾಂಬರೀಕರಣ ಮಾಡುವುದು.

(2) ಕೊಂಗಾಡಿಯಪ್ಪ ಮುಖ್ಯ ರಸ್ತೆಯಿಂದ ಮುಗವಾಳಪ್ಪ ವೃತ್ತದವರೆಗಿನ ಮುಕ್ತಾಂಬಿಕರಸ್ತೆಗೆ ಡಾಂಬರೀಕರಣ ಮಾಡುವುದು.

(3) ಹಿಂದೂಪುರ ರಸ್ತೆಯಿಂದ ನಾ. ನಂಜುಂಡಯ್ಯ ರಸ್ತೆಯವರೆಗಿನ ಕೋರ್ಟ್ ರಸ್ತೆಗೆ ಡಾಂಬರೀಕರಣ ಮಾಡುವುದು.

| ಕ್ರ.ಸಂ. | ರಸ್ತೆಗಳ ವಿವರ | ಅಂದಾಜು ಮೊತ್ತ (ಲಕ್ಷಗಳಲ್ಲಿ) |
|---|---|---|
| 1 | 2 | 3 |
| 1 | ಗುರುಭವನದಿಂದ ಜನತಾಬಜಾರ್‌ವರೆಗಿನ ಡಾ. ಬಿ.ಆರ್.ಅಂಬೇಡ್ಕರ್ ರಸ್ತೆಗೆ ಡಾಂಬರೀಕರಣ ಮಾಡುವುದು. | 8.00 |
| 2 | ಕೊಂಗಾಡಿಯಪ್ಪ ಮುಖ್ಯ ರಸ್ತೆಯಿಂದ ಮುಗವಾಳಪ್ಪ ವೃತ್ತದವರೆಗಿನ ಮುಕ್ತಾಂಬಿಕರಸ್ತೆಗೆ ಡಾಂಬರೀಕರಣ ಮಾಡುವುದು. | 20.00 |
| 3 | ಹಿಂದೂಪುರ ರಸ್ತೆಯಿಂದ ಜೆ.ಸಿ. ಸರ್ಕಲ್‌ವರೆಗಿನ ಡಿ ಕ್ರಾಸ್ ರಸ್ತೆಗೆ ಡಾಂಬರೀಕರಣ ಮಾಡುವುದು. | 27.30 |
| 4 | ಹಿಂದೂಪುರ ರಸ್ತೆಯಿಂದ ನಾ. ನಂಜುಂಡಯ್ಯ ರಸ್ತೆಯವರೆಗಿನ ಕೋರ್ಟ್ ರಸ್ತೆಗೆ ಡಾಂಬರೀಕರಣ ಮಾಡುವುದು. | 100.00 |
| 5 | ನಾ.ನಂಜುಂಡಯ್ಯ ರಸ್ತೆಯಿಂದ ತೇರಿನಬೀದಿ ರಸ್ತೆವರೆಗಿನ ಕೊಂಗಾಡಿಯಪ್ಪ ರಸ್ತೆಗೆ ಡಾಂಬರೀಕರಣ ಮಾಡುವುದು. | 10.00 |
| 6 | ಡಿ ಕ್ರಾಸ್ ರಸ್ತೆಯಿಂದ ತಾಲ್ಲೂಕು ಕಛೇರಿವರೆಗಿನ ರಸ್ತೆಗೆ ಡಾಂಬರೀಕರಣ ಮಾಡುವುದು. | 8.50 |
| 7 | ಕೊಂಗಾಡಿಯಪ್ಪ ಕಾಲೇಜು ರಸ್ತೆಯಿಂದ ಕುಚ್ಚಪ್ಪನಪೇಟೆ ರಸ್ತೆವರೆಗಿನ ಕನಕದಾಸ ರಸ್ತೆಗೆ ಡಾಂಬರೀಕರಣ ಮಾಡುವುದು. | 5.50 |
| 8 | ಡಾ. ಬಿ.ಆರ್. ಅಂಬೇಡ್ಕರ್ ರಸ್ತೆಯಿಂದ ಹಳೇ ಮಧುಗಿರಿ ರಸ್ತೆವರೆಗಿನ ಸೋಮೇಶ್ವರ ಬಡಾವಣೆ ರಸ್ತೆಗೆ ಡಾಂಬರೀಕರಣ ಮಾಡುವುದು. | 5.70 |
| 9 | ರಸೂಲ್ ಅಂಗಡಿಯಿಂದ ಚೌಡೇಶ್ವರಿ ಗುಡಿ ಮುಖಾಂತರ ತೇರಿನ ಬೀದಿವರೆಗಿನ ರಸ್ತೆಗೆ ಡಾಂಬರೀಕರಣ ಮಾಡುವುದು. | 3.75 |
| 10 | ಕೊಂಗಾಡಿಯಪ್ಪ ಕಾಲೇಜು ರಸ್ತೆಯಿಂದ ವ್ಯಾಯಾಮ ಶಾಲೆ ರಸ್ತೆವರೆಗಿನ ಕಿತ್ತೂರು ರಾಣಿ ಚನ್ನಮ್ಮ ರಸ್ತೆಗೆ ಡಾಂಬರೀಕರಣ ಮಾಡುವುದು. | 3.50 |
| 11 | ಮುಕ್ತಾಂಬಿಕ ರಸ್ತೆಯಿಂದ ತೇರಿನ ಬೀದಿ ರಸ್ತೆವರೆಗಿನ ಕುಚ್ಚಪ್ಪನ ಪೇಟೆ ಮುಖ್ಯ ರಸ್ತೆಗೆ ಡಾಂಬರೀಕರಣ ಮಾಡುವುದು. | 6.75 |
| 12 | ಮಾರ್ಕೆಟ್ ರಸ್ತೆಯಿಂದ ಟ್ಯಾಂಕ್ ರಸ್ತೆವರೆಗಿನ ಕೋಟೆ ರಸ್ತೆಗೆ ಡಾಂಬರೀಕರಣ ಮಾಡುವುದು. | 4.75 |
| 13 | ಹಿಂದೂಪುರ ರಸ್ತೆಯಿಂದ ಹುಣಸೆ ಮರದವರೆಗಿನ ಮುತ್ಸಂದ್ರ ಮುಖ್ಯ ರಸ್ತೆಗೆ ಡಾಂಬರೀಕರಣ ಮಾಡುವುದು. | 3.00 |
| 14 | ಕೊಂಗಾಡಿಯಪ್ಪ ಹೈಸ್ಕೂಲ್ ಪಕ್ಕದಿಂದ ಹನುಮಂತರಾಯಪ್ಪನವರ ತೋಟದವರೆಗಿನರಸ್ತೆಗೆ ಡಾಂಬರೀಕರಣ ಮಾಡುವುದು. | 6.50 |
| 15 | ಕರೇನಹಳ್ಳಿ, ನಂಜುಂಡೇಶ್ವರ ಕಲ್ಯಾಣ ಮಂಟಪದಿಂದ ಹೈ ಟೆನ್ಶನ್ ವೈರ್‌ವರೆಗಿನ ರಸ್ತೆಗೆ ಡಾಂಬರೀಕರಣ ಮಾಡುವುದು. | 2.00 |

| 1 | 2 | 3 |
|---|---|---|
| 16 | ಕರೇನಹಳ್ಳಿ, ಕೊಂಗಾಡಿಯಪ್ಪ ಕಾಲೇಜು ರಸ್ತೆಯಿಂದ ಲಕ್ಷ್ಮಿಪತಿ ಮನೆಯವರೆಗಿನ ರಸ್ತೆಗೆ ಡಾಂಬರೀಕರಣ ಮಾಡುವುದು. | 2.50 |
| 17 | ದೇವರಾಜನಗರ, ಪದ್ಮಶಾಲಿ ಛತ್ರದ ಹಿಂಬಾಗದ ರಸ್ತೆ ಹಾಗೂ ಬಿ.ಜಿ. ಲೋಕೇಶ್ ಮನೆಯಿಂದ ಎಲ್.ಸಿ.ರಾಜಶೇಖರಪ್ಪನ ಮನೆವರೆಗಿನ ರಸ್ತೆಗೆ ಡಾಂಬರೀಕರಣ ಮಾಡುವುದು. | 2.25 |
| 18 | ಭುವನೇಶ್ವರಿನಗರ 11 ಮತ್ತು 12ನೇ ಅಡ್ಡ ರಸ್ತೆಗೆ ಡಾಂಬರೀಕರಣ ಮಾಡುವುದು. | 2.75 |
| 19 | ಬಿ.ಎಂ.ಶ್ರೀ. ರಸ್ತೆಯಿಂದ ಬ್ರಾಹ್ಮಣರ ಬೀದಿವರೆಗಿನ ವನ್ನಿಗರ ಪೇಟೆ ಮುಖ್ಯ ರಸ್ತೆಗೆ ಡಾಂಬರೀಕರಣ ಮಾಡುವುದು. | 1.00 |
| 20 | ಕೊಂಗಾಡಿಯಪ್ಪ ಕಾಲೇಜು ರಸ್ತೆಯಿಂದ ಕುಚ್ಚಪ್ಪನಪೇಟೆ ಮುಖ್ಯ ರಸ್ತೆವರೆಗಿನ ಅ.ನ.ಕೃಷರಾವ್ ರಸ್ತೆಗೆ ಡಾಂಬರೀಕರಣ ಮಾಡುವುದು. | 5.00 |
| 21 | ಅ.ನ.ಕೃಷರಾವ್ ರಸ್ತೆಯಿಂದ ವ್ಯಾಯಾಮ ಶಾಲೆ ರಸ್ತೆಯವರೆಗೆ ಹೋಟೆಲ್ ರಾಜು ಮನೆ ಮುಂಭಾಗದ ರಸ್ತೆಗೆ ಡಾಂಬರೀಕರಣ ಮಾಡುವುದು. | 2.75 |
| 22 | ಬಿ.ಎಂ.ಶ್ರೀ ರಸ್ತೆಯಿಂದ ಮುನಿಶ್ಯಾಮಪ್ಪರವರ ಮನೆವರೆಗಿನ ಶ್ರೀನಗರದ ಮುಖ್ಯ ರಸ್ತೆಗೆ ಡಾಂಬರೀಕರಣ ಮಾಡುವುದು. | 2.00 |
| 23 | ಬಿ.ಎಂ.ಶ್ರೀ ರಸ್ತೆಯಿಂದ ಪಿಳ್ಳಗೌಡರ ಕ್ವಾರ್ಟ್ರರ್ಸ್‌ವರೆಗಿನ ದರ್ಗಾಪುರ ಮುಖ್ಯ ರಸ್ತೆಗೆ ಡಾಂಬರೀಕರಣ ಮಾಡುವುದು. | 1.50 |
| 24 | ಡಾ. ಬಿ.ಆರ್.ಅಂಬೇಡ್ಕರ್ ರಸ್ತೆಯಿಂದ ಕೋರ್ಟ್ ರಸ್ತೆವರೆಗಿನ ರೋಜಿಪುರ ಮುಖ್ಯ ರಸ್ತೆಗೆ ಡಾಂಬರೀಕರಣ ಮಾಡುವುದು. | 4.00 |
| 25 | ಕಥೇರಿಘಾಳ್ಯ ತಾಲ್ಲೂಕು ಆಫೀಸ್ ರಸ್ತೆಯಿಂದ ಹಳೇ ಮಧುಗಿರಿರಸ್ತೆಯವರೆಗಿನ ರಸ್ತೆಗೆ ಡಾಂಬರೀಕರಣ ಮಾಡುವುದು. | 3.50 |
| 26 | ಕಥೇರಿಪಾಳ್ಯ ಸಾವಿರಕಣ್ಣಮ್ಮ ದೇವಸ್ಥಾನದ ರಸ್ತೆ ಮುಖೇನ ಹಳೇ ಮಧುಗಿರಿರಸ್ತೆಯವರೆಗಿನ ರಸ್ತೆಗೆ ಡಾಂಬರೀಕರಣ ಮಾಡುವುದು. | 3.00 |
| 27 | ವಡ್ಡರಪೇಟೆಯಲ್ಲಿ ಮುತ್ಯಾಲಮ್ಮ ದೇವಸ್ಥಾನದ ರಸ್ತೆಯಿಂದ ಬುರುಗುಬಟ್ಟಿ ಮನೆ ಮುಂದಿನ ರಸ್ತೆಗೆ ಡಾಂಬರೀಕರಣ ಮಾಡುವುದು. | 1.50 |
| 28 | ಸೋಮೇಶ್ವರ ಬಡಾವಣೆ ಮುಖ್ಯ ರಸ್ತೆಯಿಂದ ಕಥೇರಿಪಾಳ್ಯ ಮುಖ್ಯ ರಸ್ತೆವೆರಗೂ ಹಾಗೂ ದೊಡ್ಡಮ್ಮ ದೇವಸ್ಥಾನದ ಮುಂಭಾಗ ಉಳಿದಿರುವ ರಸ್ತೆಗೆ ಡಾಂಬರೀಕರಣ ಮಾಡುವುದು. | 3.50 |
| 29 | ಮುತ್ತೂರು ನಬೀ ಸಾಬಿರವರ ಮನೆಯಿಂದ ಮುನಿಆಂಜಿನಪ್ಪ ಮನೆವರೆಗೆ ರಸ್ತೆಗೆ ಡಾಂಬರೀಕರಣ ಮಾಡುವುದು. | 2.00 |
| 30 | ಮುತ್ತೂರು ಖಾದರ್ ಮನೆಯಿಂದ ಬಾಬ್ ಜಾನ್ ಮನೆವರೆಗೂ ರಸ್ತೆಗೆ ಡಾಂಬರೀಕರಣ ಮಾಡುವುದು. | 3.00 |
| 31 | ಮುತ್ತೂರು ಮನಿಶ್ಯಾಂರಾವ್ ಮನೆಯಿಂದ ಮಸೀದಿವರೆಗಿನ ರಸ್ತೆಗೆ ಡಾಂಬರೀಕರಣ ಮಾಡುವುದು. | 2.00 |
| 32 | ಮುತ್ತೂರು ಮುನೀರ್ ಮನೆಯಿಂದ ಮುನೇಶ್ವರಮನೆವರೆಗಿನ ರಸ್ತೆಗೆ ಡಾಂಬರೀಕರಣ ಮಾಡುವುದು. | 2.00 |
| 33 | ಸಿದ್ದೆನಾಯ್ಕನಹಳ್ಳಿ ಆಶ್ರಯ ಬಡಾವಣೆಯ ರಸ್ತೆಗಳಿಗೆ ಡಾಂಬರೀಕರಣ ಮಾಡುವುದು. | 4.00 |
| 34 | ತೇರಿನ ಬೀದಿಯಿಂದ ಚೌಡೇಶ್ವರಿ ಗುಡಿ ಎದುರಿನ ರಸ್ತೆವರೆಗಿನ ಬ್ರಾಹ್ಮಣರ ಬೀದಿ ರಸ್ತೆಗೆ ಡಾಂಬರೀಕರಣ ಮಾಡುವುದು. | 1.50 |
| 35 | ಕೆ.ಸಿ.ಪಿ ಛತ್ರದ ಮುಂಭಾಗ ರಸ್ತೆಯಿಂದ ವಿವೇಕಾನಂದ ನಗರದ ವೆರೆಗಿನ ರಸ್ತೆಗೆ ಡಾಂಬರೀಕರಣ ಮಾಡುವುದು. | 11.50 |

| 1 | 2 | 3 |
|---|---|---|
| 36 | ಮುತ್ತೂರು ಸಿಹಿ ನೀರಿನ ಟ್ಯಾಂಕ್ ನಿಂದ ತೆಲಗು ನಾರಾಯಣಪ್ಪ ಮನೆವೆರೆಗಿನ ರಸ್ತೆಗೆ ಡಾಂಬರೀಕರಣ ಮಾಡುವುದು. | 4.00 |
| 37 | ಮುತ್ಯಾಲಮ್ಮ ಮುಖ್ಯರಸ್ತೆಯಿಂದ ಕತ್ತಾಳೆಮುಖಾನ್‌ವರೆಗಿನ ಎರಡು ರಸ್ತೆಗಳಿಗೆ ಡಾಂಬರೀಕರಣ ಮಾಡುವುದು. | 3.00 |
| 38 | ಮುತ್ಯಾಲಮ್ಮ ದೇವಸ್ಥಾನದಿಂದ ರೈಸ್ ಮಿಲ್ ಮುಖಾಂತರ ಕಛೇರಿ ಪಾಳ್ಯದ ಸ್ಮಶಾನದವೆರೆಗಿನ ರಸ್ತೆಗೆ ಡಾಂಬರೀಕರಣ ಮಾಡುವುದು. | 2.00 |
| 39 | ಕುರುಬರಹಳ್ಳೀ ಆಶ್ರಯ ಬಡಾವಣೆಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಗೆ ಡಾಂಬರೀಕರಣ ಮಾಡುವುದು. | 9.50 |
| 40 | ನಗರದಲ್ಲಿರುವ ಮುಖ್ಯವಾದ ಗಾಂಧಿ ವೃತ್ತ, ರಂಗಪ್ಪ ಸರ್ಕಲ್, ಜೆ,ಸಿ,ಸರ್ಕಲ್, ವಿಶ್ವೇಶ್ವರಯ್ಯ ಸರ್ಕಲ್, ಡಿ ಕ್ರಾಸ್ ಸರ್ಕಲ್‌ಗಳನ್ನು ಅಭಿವೃಧ್ಧಿ ಮಾಡುವುದು | 5.00 |
| | **ಒಟ್ಟು ಮೊತ್ತ** | **೩೦೦.೦೦** |

**<u>ವಿಷಯ ಸಂಖ್ಯೆ:2</u>**

ಸೊಳ್ಳೆ ನಿಯಂತ್ರಣಕ್ಕಾಗಿ ಉಪಯೋಗಿಸುವ ಬೈಟೆಕ್ಸ್ ಔಷಧಿ ದಾಸ್ತಾನು ಮುಗಿದಿರುವುದರಿಂದ ವಾರ್ಷಿಕ ಟೆಂಡರ್ ಕರೆದು ಖರೀದಿಸುವ ಪ್ರಕ್ರಿಯೆ ನಿಧಾನ ಆಗುವುದರಿಂದ ತುರ್ತಾಗಿ ದರಪಟ್ಟಿಗಳನ್ನು ಕರೆದು ಬೈಟೆಕ್ಸ್ ಖರೀದಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:2</u>**

ಮೇಲ್ಕಂಡ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಕಛೇರಿಯ ಆರೋಗ್ಯ ವಿಭಾಗಕ್ಕೆ ಅತ್ಯಾವಶ್ಯಕವಾಗಿ ಬೇಕಾಗಿರುವ ಬೈಟೆಕ್ಸ್ ಔಷಧಿಯನ್ನು ಖರೀದಿಸಲು ಹಾಗೂ ಕಛೇರಿಯಲ್ಲಿ ಹೆಚ್ಚುವರಿ ಇರುವ ಡಿ.ಗ್ರೂಫ್ ನೌಕರರನ್ನು ಸೊಳ್ಳೆ ಔಷಧಿ ಸಿಂಪಡಿಸಲು ನಿಯೋಜಿಸಿಕೊಳ್ಳುವಂತೆ ಹಾಗೂ ಮತ್ತೊಂದು ಆಟೋ ಟಿಪ್ಪರ್‌ನ್ನು ಖರೀದಿಸಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:3</u>**

ಪೌರಕಾರ್ಮಿಕರಿಗೆ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ನಿಯಮಾನುಸಾರ ಸಮವಸ್ತ್ರ ಖರೀಸುವ ವಿಚಾರ.

**<u>ತೀರ್ಮಾನ ಸಂಖ್ಯೆ:3</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ನಿಯಮಾನುಸಾರ ಈ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಪೌರಸೇವಾ ವೃಂದದ ನೌಕರರಿಗೆ ಸಮವಸ್ತ್ರವನ್ನು ಖರೀದಿಸಿ ವಿತರಿಸಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

**<u>ಅಧ್ಯಕ್ಷರ ಅಪ್ಪಣೆ ಮೇರೆಗೆ ತರಬಹುದಾದ ಇತರೆ ವಿಷಯಗಳು</u>**

**<u>ವಿಷಯ ಸಂಖ್ಯೆ:4/1</u>**

ಐ.ಡಿ.ಎಸ್.ಎಂ.ಟಿ.ಯೋಜನೆಯಡಿಯಲ್ಲಿ ಕೈಗೊಳ್ಳಲಾಗುವ ಎರಡು ಕಾಮಗಾರಿಗಳಿಗೆ ದಿನಾಂಕ: 18-03-2008ರಂದು ಟೆಂಡರ್ ಕರೆದಿದ್ದು, ಟೆಂಡರ್ ದರಗಳಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಅನುಮೋದಿಸುವ ವಿಚಾರ.

1) ದೊಡ್ಡಬಳ್ಳಾಪುರ ನಗರದ ಕೋರ್ಟ್ ಮುಂಭಾಗ ನಿರ್ಮಲನಗರ ಶೌಚಾಲಯ ನಿರ್ಮಾಣ ಅಂದಾಜು ಮೊತ್ತ ರೂ.10.00ಲಕ್ಷ.
2) ದೊಡ್ಡಬಳ್ಳಾಪುರ ನಗರದ ಸಂಜಯನಗರ ಮತ್ತು ದರ್ಗಾಪುರದಲ್ಲಿನ ಸಾರ್ವಜನಿಕ ಶೌಚಾಲಯ ದುರಸ್ಥಿ ಕಾಮಗಾರಿ ಅಂದಾಜು ಮೊತ್ತ ರೂ.1.35ಲಕ್ಷ.

**ತೀರ್ಮಾನ ಸಂಖ್ಯೆ:4/1**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಕ್ರ.ಸಂ. 1ರ ಕಾಮಗಾರಿಗೆ ಒಟ್ಟು ಎರಡು ಟೆಂಡರ್ ಬಂದಿದ್ದು, ಅವುಗಳಲ್ಲಿ ಶ್ರೀ ಬಚ್ಚೇಗೌಡ, ಗುತ್ತಿಗೆದಾರರ ದರವು ಅತೀ ಕಡಿಮೆ ದರವಾಗಿದ್ದು, ಎಸ್.ಆರ್. ದರಕ್ಕಿಂತ ಶೇ.9ರಷ್ಟು ಹೆಚ್ಚಾಗಿದ್ದು,ಈ ದರವನ್ನು ಮಂಜೂರು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಅದೇ ರೀತಿ ಕ್ರ,ಸಂ.2ರ ಕಾಮಗಾರಿಗೆ ಒಟ್ಟು ಮೂರು ಟೆಂಡರ್ ಬಂದಿದ್ದು, ಶ್ರೀ ಎ.ಆರ್. ಲಕ್ಷ್ಮೀನಾರಾಯಣ್ ಗುತ್ತಿಗೆದಾರರ ದರವು ಅತೀ ಕಡಿಮೆ ದರವಾಗಿದ್ದು, ಎಸ್.ಆರ್. ದರಕ್ಕಿಂತ ಶೇ.6ರಷ್ಟು ಕಡಿಮೆ ಇದ್ದು, ಈ ದರವನ್ನು ಮಂಜೂರು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಹಾಗೂ ಈ ಎರಡು ಟೆಂಡರ್‌ಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆಯುವಂತೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

---

**ಸಹಿ:–**
**(ಜಿ.ರಾಮಕೃಷ್ಣ)**
**ಅಧ್ಯಕ್ಷರು,**
**ನಗರಸಭೆ, ದೊಡ್ಡಬಳ್ಳಾಪುರ.**

**"ನಕಲು ಪ್ರತಿ "**

**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ.**